

# ಸ್ವರ್ಗಕ್ಕೆ ದಾರಿ ಯಾವುದಯ್ಯ

ಇಂಗ್ಲಿಷ್ ಮೂಲ: ರೊಆಲ್ಡ್ ದಾಹ್ಲ್
**ಕನ್ನಡಕ್ಕೆ: ಜೆ.ವಿ. ಕಾರ್ಲೊ**

ಬೇರೆಲ್ಲಾ ವಿಚಾರಗಳಲ್ಲಿ ಮಿಸೆಸ್ ಫೋಸ್ಟರ್ ಇತರ ಹೆಂಗಸರಂತೆ ಒಬ್ಬ ಸಾಮಾನ್ಯ ಗೃಹಿಣಿಯಾಗಿದ್ದಳು. ಆದರೆ ದೊಡ್ಡವಳಾಗಿದ್ದಾಗಿನಿಂದಲೂ ಅವಳ ತಲೆಯೊಳಗೆ ಕಾಡುತ್ತಿದ್ದುದ್ದು ಒಂದೇ ವಿಚಾರ: ಅದು, ಬಸ್ಸು, ರೈಲು, ವಿಮಾನ, ಹಡಗು... ಕೊನೆಗೆ ಸಿನಿಮಾ ಟಿಕೆಟ್ ಕೂಡ!... ತನಗೆ ಎಲ್ಲಿ ತಪ್ಪಿ ಹೋಗುತ್ತದೆಂಬ ಫೋಬಿಯಾ. ಎಲ್ಲಿಗಾದರೂ ಹೊರಟಾಗಲಂತೂ ಅವಳ ಈ ಭಯ ತಾರಕಕ್ಕೆ ಮುಟ್ಟಿ ಅವಳನ್ನು ಮಾನಸಿಕವಾಗಿ ಹೈರಾಣಾಗಿಸುತ್ತಿತ್ತು. ಆ ಸಂದರ್ಭಗಳಲ್ಲಿ ಅವಳ ಹಣೆಯ ಮೇಲಿನ ನರವೊಂದು ಎಲ್ಲರಿಗೂ ಎದ್ದು ಕಾಣಿಸುವಂತೆ ಮಿಡಿಯುತ್ತಿರುತ್ತಿತ್ತು. ಮೇಲ್ನೋಟಕ್ಕೆ ಮಿಸೆಸ್ ಫೋಸ್ಟರ್ ಕಣ್ಣು ಮಿಟುಕಿಸುತ್ತಿರುವಂತೆ ಕಾಣುತ್ತಿತ್ತು! ಮಿಸೆಸ್ ಫೋಸ್ಟರ್ ವಿಮಾನದಲ್ಲೋ ಬಸ್ಸಿನಲ್ಲೋ ಕುಳಿತ ಅದೆಷ್ಟೋ ಹೊತ್ತಿನ ನಂತರವೇ ಅದು ಶಾಂತವಾಗುತ್ತಿತ್ತು.

ಮನುಷ್ಯನ ತಲೆಯೊಳಗೆ ಜರುಗುವ ಇಂಥ ಅತಾರ್ಕಿಕ ಭಯಗಳು ವಿಚಿತ್ರವಾದರೂ ಅದನ್ನು ಎದುರಿಸುವವರಿಗೆ ಮಾನಸಿಕವಾಗಿ ನಿಜವಾಗಲೂ ಕಂಗೆಡಿಸುತ್ತಿತ್ತು. ಒಂದು ರೈಲು ಹತ್ತುವ ಮಾಮೂಲು ಸಂಗತಿ ಒಬ್ಬ ವ್ಯಕ್ತಿಯನ್ನು ಎಷ್ಟೊಂದು ಆತಂಕಕ್ಕೀಡುಮಾಡುತ್ತದೆ ಎಂಬುದನ್ನು ನೆನೆದರೇ ಆಶ್ಚರ್ಯವಾಗುತ್ತದೆ. ರೈಲು ಹೊರಡುವ ಅರ್ಧ ಗಂಟೆ ಮೊದಲೇ ಮಿಸೆಸ್ ಫೋಸ್ಟರ್ ತಯಾರಾಗಿ, ಲಿಫ್ಟ್ ಇಳಿದು ಡ್ರಾಯಿಂಗ್ ರೂಮಿಗೆ ಬಂದಿರುತ್ತಿದ್ದಳು. ಕುಳಿತುಕೊಳ್ಳಲು ಹೆಜ್ಜೆ ಹಾಕುತ್ತಿದ್ದವಳು ಮನಸ್ಸು ಬದಲಾಯಿಸಿ ಅಲ್ಲೇ ಶತಪಥ ಹಾಕುತ್ತಿದ್ದಳು. ಅಷ್ಟರಲ್ಲಾಗಲೇ ಅವಳ ಹೊಟ್ಟೆಯೊಳಗೆ ಚಿಟ್ಟೆಗಳು ಹಾರಾಡುತ್ತಿರುವ ಹಾಗೆ ತೋಳಸುವ